**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,**

**ಶ್ರೀರಂಗಪಟ್ಟಣ.**

ಸಿ.ಸಿ.ಃ 85/2011

ಪಿ. ಡಬ್ಲ್ಯುಃ 06

ಸಿ. ಡಬ್ಲ್ಯುಃ 10

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮಹಾಲಕ್ಷ್ಮಿ |
| ತಂದೆ/ಪತಿಯ ಹೆಸರು | ಃ | ಶಿವಕುಮಾರ್.ಜೆ.ಎನ್ |
| ವಯಸ್ಸು | ಃ | 30 ವರ್ಷ |
| ವೃತ್ತಿ | ಃ | ಗೃಹಿಣಿ |
| ವಾಸ | ಃ | ಕೊತ್ತತ್ತಿ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 21.11.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು 2014 ರಲ್ಲಿ ನಿರ್ಮಲ ವಿದ್ಯಾಸಂಸ್ಥೆಯಲ್ಲಿ ಸಹ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆ. ಚಾಸಾ.1 ಗೊತ್ತು. ಚಾಸಾ.2 ರಿಂದ 5 ನನಗೆ ಗೊತ್ತು. ಚಾಸಾ.2 4 ನೇ ತರಗತಿಯಲ್ಲಿ, ಚಾಸಾ.3 5 ನೇ ತರಗತಿಯಲ್ಲಿ ಹಾಗೂ ಚಾಸಾ.4 ರವರು 6 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಆರೋಪಿ ಗೊತ್ತು. ಚಾಸಾ.6 ದೀಪಿಕಾ ರವರ ತಾಯಿ. ಚಾಸಾ.7 ಸೋನಾಕ್ಷಿ ರವರ ತಾಯಿ. ಚಾಸಾ.8 ಗೊತ್ತು. ಚಾಸಾ.9 ಗೊತ್ತು. ಆರೋಪಿ ಗೊತ್ತು.

ನನಗೆ ಯಾವುದೇ ಘಟನೆ ಬಗ್ಗೆ ಗೊತ್ತಿಲ್ಲ. ಪೋಲೀಸರಿಗೆ ನಾನು ಯಾವುದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ**

ದಿಃ ೨೬.೦೩.೨೦೧೪ ರಂದು ಬೆಳಿಗ್ಗೆ ೧೧.೩೦ ಸಮಯದಲ್ಲಿ ಆರೋಪಿ ೫ನೇ ತರಗತಿಗೆ ಸಮಾಜ ಪಾಠ ತೆಗೆದುಕೊಂಡಿದ್ದರು ಮತ್ತು ಸಮಾಜ ಪಾಠದಲ್ಲಿ ದೀಪಿಕಾ ಹಾಗೂ ಸೋನಾಕ್ಷಿಗೆ ಪ್ರಶ್ನೆಗಳನ್ನು ಕೇಳಿದ್ದು ಅವರು ಉತ್ತರಿಸದ ಕಾರಣ ಅವರಿಗೆ ಕೋಲಿನಿಂದ ಕೈ ಮೇಲೆ ಹಾಗೂ ಕೈಗಳಿಂದ ಮೈ ಮೇಲೆ ಹೊಡೆದಿದ್ದರು ಎಂದರೆ ಸುಳ್ಳು. ನಂತರ

ಮರುದಿನ ಬೆಳಿಗ್ಗೆ ದೀಪಿಕಾ ಮತ್ತು ಸೋನಾಕ್ಷಿರವರ ತಾಯಿ  ಶಾಲೆಗೆ ಬಂದು ನಮ್ಮ ಶಾಲೆಯ ಹೆಚ್.ಎಂ. ಆದ ಸರಸ್ವತಿಯವರನ್ನು ಅವರ ಮಕ್ಕಳಿಗೆ ಆರೋಪಿ ಹೊಡೆದ ವಿಚಾರದ ಬಗ್ಗೆ ಕೇಳಿದ್ದರು ಎಂದರೆ ಸರಿ.  ಈ ಘಟನೆ ಬಗ್ಗೆ ಧನಲಕ್ಷಿ ಆರೋಪಿಯವರನ್ನು ವಿಚಾರ ಮಾಡಿದರು ಎಂದರೆ ಗೊತ್ತಿಲ್ಲ. ಆರೋಪಿ ಸೋನಾಕ್ಷಿ ಹಾಗೂ ದೀಪಿಕಾ ರವರಿಗೆ ಹೊಡೆದಿದ್ದ ವಿಚಾರಕ್ಕೆ ಧನಲಕ್ಷ್ಮಿರವರು ಪೋಲೀಸ ಠಾಣೆಗೆ ಆರೋಪಿ ವಿರುದ್ದ ದೂರು ನೀಡಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿ. ಆರೋಪಿ ನ್ಯಾಯಾಲಯದ ಮುಂದಿರುವ ಕೋಲಿನಿಂದಲೇ  ಮಕ್ಕಳಿಗೆ ಹೊಡೆದಿದ್ದರು ಎಂದರೆ ಸುಳ್ಳು.  ಆರೋಪಿ ದೀಪಿಕಾ ಹಾಗೂ ಸೋನಾಕ್ಷಿಗೆ ಕೋಲಿನಿಂದ ಹಾಗೂ ಕೈಗಳಿಂದ ಹೊಡೆದಿದ್ದರೂ ಮತ್ತು ಪೋಲೀಸರಿಗೆ ನಾನು ಸದರಿ ಘಟನೆ ಸಂಬಂಧ ಹೇಳಿಕೆಯನ್ನು ಕೂಡ ಈಗ ಓದಿ ಹೇಳಿದಂತೆ "ಈಗ್ಗೆ ಸುಮಾರು ೪ ವರ್ಷದಿಂದ  ತಾತ್ಕಲಿಕ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ –------------------ ಮಾಸ್ಟರ್ ಬಿ.ತಿಮ್ಮಯ್ಯನವರು ಗೊತ್ತು, ಕೃತ್ಯಕ್ಕೆ ಬಳಸಿದ ಕೋಲನ್ನು ನೋಡಿರುತ್ತೇನೆ ಮತ್ತೆ ನೋಡಿದರೆ ಗುರುತಿಸುತ್ತೇನೆ " ಎಂದು ಪೋಲೀಸರಿಗೆ ಹೇಳಿಕೆ ನೀಡಿದ್ದೇನು ಎಂದರೆ ಸುಳ್ಳು.  ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ.೧೨ ಎಂದು ಗುರುತಿಸಲಾಯಿತು.

ಆರೋಪಿ ಚಾಸಾ.೨ ಮತ್ತು ೩ ರವರಿಗೆ  ಹೊಡೆದು ಗಲಾಟೆ ಮಾಡಿದ್ದರೂ ಕೂಡ ಆರೋಪಿಗೆ ಸಹಾಯವಾಗಲಿ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಏನು ಇಲ್ಲ

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.